ಅ) ಈ ಮಹಾ ವಿದ್ಯಾಲಯದಲ್ಲಿ ಕಲಾ ಹಾಗೂ ವಿಜ್ಞಾನ ವಿಭಾಗಗಳನ್ನು ನಡೆಸುವ ಸಲುವಾಗಿ ಸುಮಾರು 70 ಲಕ್ಷ ರೂಪಾಯಿಗಳ ಕಟ್ಟಡವನ್ನು ಕಟ್ಟಿದ ಸಂಗತಿ ನಿಜವೆ?

ಇ) ಇಲ್ಲಿನ ವಿಜ್ಞಾನ ವಿಭಾಗವನ್ನು ಬೇರೆ ಕಡೆಗೆ ಸ್ಥಳಾಂತರಿಸಿದ ಸಂಗತಿ ನಿಜವೇ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಹೌದು

ಆ) ಹೌದು

ಇ) ಹೌದು. ವಿದ್ಯಾರ್ಥಿಗಳ ಕೊರತೆಯಿಂದ ವಿಜ್ಞಾನ ವಿಭಾಗವನ್ನು ಸ್ಥಳಾಂತರಿಸಲಾಗಿದೆ.

ಕಡೂರು ತಾಲ್ಲೂಕಿನಲ್ಲಿ ದಶ ಲಕ್ಷ ಬಾವಿ ಯೋಜನೆ ವಿಫಲತೆ

2567 (3372) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು) :— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ)1988-89ರಲ್ಲಿ ಕಡೂರು ತಾಲ್ಲೂಕಿನಲ್ಲಿ ದಶ ಲಕ್ಷ ಬಾವಿ ಯೋಜನೆಯಡಿಯಲ್ಲಿ ಎಷ್ಟು ಬಾವಿ ಮಂಜೂರು ಮಾಡಲಾಗಿದೆ.

ಆ) ಲಕ್ಕೇನಹಳ್ಳಿ ಮತಗಟ್ಟೆ ಕಡೂರು ತಾಲ್ಲೂಕು ಹಾಗೂ ಬೀರವಹಳ್ಳಿ ಫಲಾನುಭವಿಗಳಿಗೆ ದಶ ಲಕ್ಷ ಬಾವಿ ಯೋಜನೆಯು ಮಂಜೂರಾಗಿದೆಯೆ; ಹಾಗಿದ್ದಲ್ಲಿ, ಮಂಜೂರಾಗಿರುವ ಬಾವಿಯಲ್ಲಿ ನೀರು ಬಂದಿದೆಯೆ;

ಇ) ಈ ಯೋಜನೆಯ ವಿಫಲದ ಬಗ್ಗೆ ಫಲಾನುಭವಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿಕೊಟ್ಟಿರುವುದು ನಿಜವೆ;

ಈ) ಹಾಗಿದಲ್ಲಿ ಈ ಯೋಜನೆಯಿಂದ ಫಲಾನುಭವಿಗಳಿಗೆ ನೀಡಿದ ಸಾಲವೆಷ್ಟು ಹಾಗೂ ಇಲ್ಲಿಯವರೆಗೆ ಸಾಲದ ಮೇಲಿನ ಬಡ್ಡಿ ಎಷ್ಟು?

ಶ್ರೀ ಎಂ.ವೈ ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :—

ಅ) 1988-89 ಸಾಲಿನಲ್ಲಿ ಕಡೂರು ತಾಲ್ಲೂಕಿಗೆ ದಶಲಕ್ಷ ಬಾವಿ ಯೋಜನೆಯಡಿ ಬಾವಿ ಮಂಜೂರಾಗಿರುವುದಿಲ್ಲ

ಆ) ಲಕ್ಕೇನಹಳ್ಳಿ ಮತಗಟ್ಟೆ ಕಡೂರು ತಾಲ್ಲೂಕು ಹಾಗೂ ಬೀರನಹಳ್ಳಿ ಫಲಾನುಭವಿಗಳಿಗೆ ದಶ ಲಕ್ಷ ಬಾವಿ ಯೋಜನೆಯಲ್ಲಿ ಬಾವಿ ಮಂಜೂರಾಗಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ಕಡೂರು ತಾಲ್ಲೂಕಿನಲ್ಲಿ ಮಲೇರಿಯಾ ರೋಗ ನಿವಾರಣೆ

2568 (3373) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಡೂರು ತಾಲ್ಲೂಕಿನಲ್ಲಿ ಮಲೇರಿಯಾ ರೋಗಕ್ಕೆ ಎಷ್ಟು ಜನರು ತುತ್ತಾಗಿರುವರು; ಸೋಂಕು ಎಷ್ಟು ಸಾಬೀತಾಗಿದೆ. ಹಾಗಿದ್ದಲ್ಲಿ, ನಿವಾರಣೆಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) 2001ನೇ ಸಾಲಿನಲ್ಲಿ ಕಡೂರು ತಾಲ್ಲೂಕಿನಲ್ಲಿ ಇಲ್ಲಿಯವರೆಗೆ ಒಟ್ಟು 51908 ರಕ್ತ ಲೇಪನಗಳನ್ನು ಸಂಗ್ರಹಿಸಿ ಪರೀಕ್ಷಿಸಿ ಅದರಲ್ಲಿ 9720 ಮಲೇರಿಯಾ ಪ್ರಕರಣಗಳು ಕಂಡುಬಂದಿರುತ್ತವೆ. ಇದೇ ಸಾಲಿನಲ್ಲಿ ಇಲ್ಲಿಯವರೆಗೆ ಒಟ್ಟು 3 ಮರಣ ಪ್ರಕರಣಗಳು ಮಲೇರಿಯಾದಿಂದ ಎಂದು ದೃಡಪಟ್ಟಿರುತ್ತದೆ.

ಮಲೇರಿಯಾ ರೋಗ ನಿಟಹತ್ರಣಕ್ಕೆ ಕಡೂರು ತಾಲ್ಲೂಕಿನಲ್ಲಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಸಮಸ್ಯೆಯಲ್ಲದ ಮಲೆನಾಡು ಪ್ರದೇಶಗಳಿಂದ ಪುರುಷ ಆರೋಗ್ಯ ಸಹಾಯಕರು ಮತ್ತು ಪ್ರಯೋಗಶಾಲಾ ತಂತ್ರಜ್ಞರನ್ನು ನಿಯೋಜಿಸಿ ತೀವ್ರ ಜ್ವರ ಸಮೀಕ್ಷೆ ಶೀಘ್ರ ಪರೀಕ್ಷೆ ಮತ್ತು ತ್ವರಿತ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿದೆ.

2. 2001ನೇ ಸಾಲಿನಲ್ಲಿ ಮೊದಲನೇ ಸುತ್ತಿಗೆ 5 ಮೆಟ್ರಿಕ್ ಟನ್ ಮೆಲಾಥಿಯಾನ್ ಕೀಟನಾಶಕವನ್ನು ಸಮಸ್ಯಾತ್ಮಕ ಗ್ರಾಮಗಳಲ್ಲಿ ರೋಗ ವಾಹಕ ಸೊಳ್ಳೆಗಳ ನಿಯಂತ್ರಣಕ್ಕಾಗಿ